# ನಿವೇದನೆ

## ಉಸಿರುಗಟ್ಟಿದ ‘ದೆಹಲಿಗನ್ನಡಿ’ಯಲ್ಲಿ ನಮ್ಮ ಬಿಂಬಗಳು! ನಮ್ಮ ನಗರಗಳ ಕಥೆಯೇನು? ಎಳೆಯರ ಪಾಡೇನು?

ದೆಹಲಿಯಲ್ಲಿ ವಾಯುಮಾಲಿನ್ಯ ಸ್ಥಿತಿ ಗಂಭೀರಮಟ್ಟ ತಲುಪಿದೆ. ಅದು ನಮಗೆ ಸಂಬಂಧಿಸದ ದೂರದ ವಿದ್ಯಮಾನವೆಂದು ನಾವು ತಣ್ಣಗೆ ಕೂತಿದ್ದೇವೆ. ನಮ್ಮ ಬುಡಕ್ಕೆ ಈಗಾಗಲೇ ತಾಕಿರುವ ಕಾವು ಕಿಡಿಯಾಗಿ ಸುಡುವ ದಿನ ದೂರವೇನೂ ಇಲ್ಲ ಎನ್ನುವ ಸತ್ಯಕ್ಕೆ ಬೆನ್ನುಹಾಕಿದ್ದೇವೆ.

ದೆಹಲಿಯಲ್ಲಿನ ವಿದ್ಯಮಾನಗಳಿಗೆ ಸಂಬಂಧಿಸಿದ ವರದಿಗಳ ಮುಖ್ಯಾಂಶಗಳನ್ನು ಗಮನಿಸಿ: ವಿಷಾನಿಲಗಳ ಕೊಠಡಿಯಾಗಿ ಮಹಾನಗರ ಮಾರ್ಪಟ್ಟಿದೆ. ಇತ್ತೀಚಿನ ದಿನಗಳಲ್ಲಿ ರಾಷ್ಟ್ರ ರಾಜಧಾನಿಯ ‘ವಾಯು ಗುಣಮಟ್ಟ ಸೂಚ್ಯಂಕ’ವು 425ರ ಆಸುಪಾಸಿನಲ್ಲಿ ಸುಳಿದಾಡುತ್ತಿದೆ. ಮಾಸ್ಕ್ ಧರಿಸದೆ ಜನ ಮನೆಯಿಂದ ಹೊರಬರುವುದು ಕಷ್ಟ ಎನ್ನುವಂತಾಗಿದೆ. ವಿಮಾನ ನಿಲ್ದಾಣಗಳಲ್ಲಿ ನೂರು ಮೀಟರ್ ದೂರದ ವಿಮಾನವು ಮಸುಕು ಮಸುಕಾಗಿದೆ. ಸರ್ಕಾರಿ ಕಚೇರಿಗಳಲ್ಲಿನ ಶೇ. 50ರಷ್ಟು ನೌಕರರು ಮನೆಯಿಂದ ಕೆಲಸ ಮಾಡಲು ಸರ್ಕಾರ ಅವಕಾಶ ಕಲ್ಪಿಸಿದೆ. ಖಾಸಗಿ ಸಂಸ್ಥೆಗಳೂ ಇದೇ ಕ್ರಮ ಅನುಸರಿಸುವಂತೆ ಸರ್ಕಾರ ಒತ್ತಾಯಿಸಿದೆ. ಸಾರ್ವಜನಿಕ ಸೇವೆಗೆ ಧಕ್ಕೆಯಾಗದಂತೆ ಆರೋಗ್ಯ, ಒಳಚರಂಡಿ, ಸಾರ್ವಜನಿಕ ಸಾರಿಗೆ, ನೀರು ಸರಬರಾಜಿನಂಥ ತುರ್ತು ಸೇವೆಗಳನ್ನು ಒದಗಿಸುವ ನೌಕರರಷ್ಟೇ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಅನಿವಾರ್ಯವಾಗಿ ಮತ್ತೆ ಆನ್‌ಲೈನ್ ಶಿಕ್ಷಣದ ಮೊರೆ ಹೋಗಬೇಕಾಗಿದೆ. ಕಣ್ಣು ಉರಿ, ಉಸಿರಾಟದ ಸಮಸ್ಯೆಗಳು ಸೇರಿದಂತೆ ಹಲವು ತೊಂದರೆಗಳನ್ನು ನಾಗರಿಕರು ಎದುರಿಸುತ್ತಿದ್ದಾರೆ. ಮನುಷ್ಯರ ಸ್ಥಿತಿಯೇ ಹೀಗಿರುವಾಗ ಉಳಿದ ಪ್ರಾಣಿಗಳ ಪಾಡಿನ ಬಗ್ಗೆ ಯಾರು ತಲೆ ಕೆಡಿಸಿಕೊಂಡಾರು?

ವಾಯುಮಾಲಿನ್ಯದ ಬಾಧೆಗೊಳಗಾಗಿರುವ ವಿಶ್ವದ ಮಹಾನಗರಗಳಲ್ಲಿ ಲಾಹೋರ್ ನಂತರದ ಸ್ಥಾನ ದೆಹಲಿಯದ್ದಾಗಿದೆ. ಕೋಲ್ಕತ್ತ ಹಾಗೂ ಮುಂಬೈ ಮಹಾನಗರಗಳೂ ಮಾಲಿನ್ಯಸ್ಫೋಟ ಅಪಾಯದ ಅಂಚಿನಲ್ಲಿವೆ. ಈ ಮಹಾನಗರಗಳ ಸದ್ಯದ ಸ್ಥಿತಿ ಮುಂದಿನ ಎಲ್ಲ ಮಹಾನಗರಗಳ ವಾಸ್ತವವೂ ಆಗುವ ದಿನ ದೂರವೇನೂ ಇಲ್ಲ. ಭಾರತದ ಸಣ್ಣ ನಗರಗಳ ವಾತಾವರಣವೂ ವರ್ಷದಿಂದ ವರ್ಷಕ್ಕೆ ಹದಗೆಡುತ್ತಿದೆ. ಕರ್ನಾಟಕದ ಬೆಂಗಳೂರು, ಮಂಗಳೂರುಗಳ ವಿಷಯವಿರಲಿ – ಹುಬ್ಬಳ್ಳಿ, ಕಲಬುರಗಿ ನಗರಗಳಲ್ಲೂ ಪರಿಸರ ಮಾಲಿನ್ಯದ ಮಟ್ಟ ಆತಂಕ ಹುಟ್ಟಿಸುವಂತಿದೆ. ದೇಶದ ಶೇ. 76ಕ್ಕೂ ಹೆಚ್ಚು ನಾಗರಿಕರು ವಾಯುಮಾಲಿನ್ಯ ನಿರಂತರವಾಗಿ ಹದಗೆಡುತ್ತಿರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

ವಾತಾವರಣದಲ್ಲಿನ ಬದಲಾವಣೆಗಳ ಹೆಚ್ಚಿನ ಸಂತ್ರಸ್ತರು ಮಕ್ಕಳು ಎನ್ನುವುದು ಕಳವಳದ ಸಂಗತಿ. ವಾತಾವರಣವನ್ನು ಹದಗೆಡಿಸುವುದರಲ್ಲಿ ಯಾವ ಪಾತ್ರವೂ ಇಲ್ಲದ ಎಳೆಯರು, ಹಿರಿಯರ ಬೇಜವಾಬ್ದಾರಿ ಹಾಗೂ ಸ್ವಾರ್ಥದ ಫಲವನ್ನು ಅನುಭವಿಸಬೇಕಾಗಿದೆ.

ವಾತಾವರಣದಲ್ಲಿನ ಬದಲಾವಣೆಗಳ ಹೆಚ್ಚಿನ ಸಂತ್ರಸ್ತರು ಮಕ್ಕಳು ಎನ್ನುವುದು ಕಳವಳದ ಸಂಗತಿ. ವಾತಾವರಣವನ್ನು ಹದಗೆಡಿಸುವುದರಲ್ಲಿ ಯಾವ ಪಾತ್ರವೂ ಇಲ್ಲದ ಎಳೆಯರು, ಹಿರಿಯರ ಬೇಜವಾಬ್ದಾರಿ ಹಾಗೂ ಸ್ವಾರ್ಥದ ಫಲವನ್ನು ಅನುಭವಿಸಬೇಕಾಗಿದೆ.

2050ರ ವೇಳೆಗೆ ವಿಶ್ವದ ಮೂರನೇ ಒಂದು ಭಾಗದಷ್ಟು ಮಕ್ಕಳು ಭಾರತ, ಚೀನಾ, ಪಾಕಿಸ್ತಾನ ಹಾಗೂ ನೈಜೀರಿಯಾಗಳಲ್ಲಿ ಇರಲಿದ್ದಾರೆ. ವಿಶ್ವದ ಮಕ್ಕಳಲ್ಲಿ ನೂರರಲ್ಲಿ ಹದಿನೈದು ಮಂದಿ ಭಾರತೀಯರಾಗಿರುತ್ತಾರೆ. ಈ ಜಾಣಜಾಣೆಯರು ವಾತಾವರಣದಲ್ಲಿನ ಗಂಭೀರ ಬದಲಾವಣೆಗಳಿಂದ ತೀವ್ರ ಬಾಧೆಗೊಳಗಾಗಲಿದ್ದಾರೆ ಎಂದು ‘ಯುನಿಸೆಫ್’ ವರದಿ ಹೇಳಿದೆ. ಭವಿಷ್ಯದ ಮಕ್ಕಳು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸುವ ನಿಟ್ಟಿನಲ್ಲಿ ಅವರನ್ನು ಆರೋಗ್ಯದಿಂದ ಇರುವಂತೆ ನೋಡಿಕೊಳ್ಳುವ ಯೋಜನೆಗಳನ್ನು ರೂಪಿಸುವ ಗಂಭೀರ ಸವಾಲು ಭಾರತದ ಮುಂದಿರುವುದನ್ನು ‘ಯುನಿಸೆಫ್’ ವರದಿ ನೆನಪಿಸುವಂತಿದೆ. ‘ಹೆಲ್ತ್ ಎಫೆಕ್ಟ್ ಇನ್‌ಸ್ಟಿಟ್ಯೂಟ್’ನ (ಎಚ್‌ಇಐ) 2019ರ ವರದಿ, ವಾಯುಮಾಲಿನ್ಯದ ಪರಿಣಾಮದಿಂದಾಗಿ 2019ರಲ್ಲಿ 1.16 ಲಕ್ಷ ನವಜಾತ ಶಿಶುಗಳು ಭಾರತದಲ್ಲಿ ಮರಣ ಹೊಂದಿರುವುದನ್ನು ಗುರ್ತಿಸಿತ್ತು. ಉಸಿರಾಟ ಸಂಬಂಧಿ ಸಮಸ್ಯೆಗಳಿಂದ ಬಳಲುವವರ ಸಂಖ್ಯೆಯಲ್ಲೂ ಭಾರತ ಮುಂಚೂಣಿಯಲ್ಲಿದೆ.

ದೇಶದ ಮುಂದಿನ ತಲೆಮಾರುಗಳ ಭವಿಷ್ಯದ ಬಗ್ಗೆ ‘ಯುನಿಸೆಫ್’ ಹಾಗೂ ‘ಎಚ್‌ಇಐ’ ಅಧ್ಯಯನ ವರದಿಗಳು ಆತಂಕ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ, ಮಕ್ಕಳ ನಾಳೆಗಳಿಗೆ ಸುರಕ್ಷತೆಯನ್ನು ಖಾತರಿಗೊಳಿಸುವ ನಿಟ್ಟಿನಲ್ಲಿ ನಾವೆಷ್ಟು ಕ್ರಿಯಾಶೀಲರಾಗಿದ್ದೇವೆ ಎನ್ನುವ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಈ ಪ್ರಶ್ನೆಗೆ ಉತ್ತರರೂಪದಲ್ಲಿ ದೆಹಲಿಯಲ್ಲಿನ ಆಗುಹೋಗುಗಳನ್ನು ಗಮನಿಸಬಹುದು. ರಾಷ್ಟ್ರ ರಾಜಧಾನಿಯ ಆರೋಗ್ಯ ತುರ್ತು ನಿಗಾ ಘಟಕದಲ್ಲಿದ್ದರೂ, ಬಿಕ್ಕಟ್ಟಿಗೆ ಉತ್ತರ ಕಂಡುಕೊಳ್ಳಬೇಕಾದ ರಾಜಕೀಯ ಪಕ್ಷಗಳು ಪರಸ್ಪರ ದೂಷಣೆಯಲ್ಲಿ ತೊಡಗಿವೆ. ಪರಿಸರ ಹಾಳಾಗಿರುವಲ್ಲಿ ಎಲ್ಲ ಪಕ್ಷಗಳ ಪಾತ್ರವೂ ಇದೆ ಎನ್ನುವುದನ್ನು ರಾಜಕೀಯ ಮುಖಂಡರು ಮರೆತಿರುವಂತಿದೆ. ಸದ್ಯದ ಬಿಕ್ಕಟ್ಟಿಗೆ ರಾಜಕಾರಣದ ಸ್ಪರ್ಶ ನೀಡುವುದರಲ್ಲಿ ತಮ್ಮ ರಾಜಕೀಯ ಅಸ್ತಿತ್ವ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಜನರು ನಾಳೆಗಳ ಕುರಿತು ಯೋಚಿಸುತ್ತಾರೆಂದು ಹೇಗೆ ನಿರೀಕ್ಷಿಸುವುದು?

‘ನಮ್ಮ ಜೀವಕ್ಕೆ ನಾವೇ ಹೊಣೆ’ ಎನ್ನುವ, ಕೊರೊನಾ ಕಾಲಘಟ್ಟ ಮನದಟ್ಟು ಮಾಡಿಸಿದ ಅಮೂಲ್ಯ ಪಾಠವನ್ನು ನಾವು ಸುಲಭಕ್ಕೆ ಮರೆಯಬಾರದು.

■ ರಘುನಾಥ ಚ.ಹ.


ಈಶ್ವರ್